1. ಮುಂದುವರೆದ ಮಳೆಯಿಂದ

2. ಸ್ಥಳೀಯ ಹಳ್ಳಿಗರಿಂದ ಕಲ್ಲಿನ ಕ್ವಾರಿಯನ್ನು ಮಾಡಲು ವಿರೋಧಿಸಿದ್ದರಿಂದ

3. EDU ಉಪಗ್ರಹ ಉಡಾವಣೆಗಾಗಿ ISRO ಇವರು ರಸ್ತೆಯ ಅಗೆತದ ಕಾಮಗಾರಿಯನ್ನು ಸ್ಥಗಿತಗೊಳಿಸಲು ಆದೇಶಿಸಿದ್ದರಿಂದ.

4. ವಿಧಾನ ಸಭೆಗೆ ಸಾರ್ವತ್ರಿಕ ಚುನಾವಣೆ ಕಾಲದಲ್ಲಿ ಕಾಮಗಾರಿಯ ಸ್ಥಳದಲ್ಲಿ ಜಲ್ಲಿಯನ್ನು ಅಳವಡಿಸಬಾರದೆಂದು ಜಿಲ್ಲಾಧಿಕಾರಿಗಳು ಆದೇಶಿಸಿದ್ದರಿಂದ

5. ಬಿಟಮಿನ್ ಕಂಪನಿಗಳ ಮತ್ತು ಸಾರಿಗೆ ಕಂಪನಿಗಳ ಮುಷ್ಕರದಿಂದ.

6. ಅಲ್ಲದೆ ಗುತ್ತಿಗೆದಾರರಿಂದ ಸಾಮಗ್ರಿ ಮತ್ತು ಯಂತ್ರೋಪಕರಣಗಳ ಸಜ್ಜುಗೊಳಿಸುವಲ್ಲಿ ಆದ ವಿಳಂಬದಿಂದ.

ಈ. ಗುತ್ತಿಗೆದಾರರಿಂದ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಳಂಬವಾದಲ್ಲಿ ಗುತ್ತಿಗೆ ಕರಾರಿನಂತೆ ಗುತ್ತಿಗೆದಾರರಿಗೆ ಅವರು ಪೂರ್ಣಗೊಳಿಸಬೇಕಾಗಿರುವ ದಿನಾಂಕದಿಂದ ಬಾಕಿ ಉಳಿದಿರುವ ಕಾಮಗಾರಿಯ ಮೊತ್ತದ ಪ್ರತಿದಿನ ಶೇ.1 ರಂತೆ ದಂಡವನ್ನು ಅವರು ಕೋರಿರುವ ವಿಸ್ತರಣಾ ಅವಧಿಯವರೆಗೆ ವಿಧಿಸಲಾಗುವುದು ಮತ್ತು ಈ ದಂಡದ ಗರಿಷ್ಟ ಮೊತ್ತವು ಕಾಮಗಾರಿಯ ಅಂದಾಜು ಮೊತ್ತದ ಶೇ 7.5 ನ್ನು ಮೀರದಂತೆ ದಂಡವನ್ನು ವಿಧಿಸಬಹುದಾಗಿದೆ. (ಅಗ್ರಿಮೆಂಟ್‌ನ ದಂಡ ವಿಧಿಸುವ ಕಲಮಿನ ಪ್ರತಿಯನ್ನು ಲಗತ್ತಿಸಲಾಗಿದೆ.)

ಉ. ಕ್ರಮ ಜರುಗಿಸಲಾಗಿದೆ.

ಊ. ಈ ಅಗ್ರಿಮೆಂಟಿನಂತೆ ಗುತ್ತಿಗೆದಾರರಿಗೆ ಅಂದಾಜು ಪಟ್ಟಿ ಮೊತ್ತದ ಶೇ 7.50 ರಷ್ಟು ಗರಿಷ್ಟ ದಂಡವಾದ ರೂ.2.33 ಕೋಟಿಗಳನ್ನು ವಿಧಿಸಲಾಗಿದೆ.

265 (404) ಶ್ರೀ ಶಿವಶಂಕರ್‌ರೆಡ್ಡಿ ಎನ್.ಹೆಚ್ (ಗೌರಿಬಿದನೂರು) ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಗೌರಿಬಿದನೂರು ತಾಲ್ಲೂಕಿನಲ್ಲಿ ಪ್ರತಿಭಾವಂತ ಕ್ರೀಡಾಪಟುಗಳ ಅನುಕೂಲತೆಯ ಸಲುವಾಗಿ ಕ್ರೀಡಾಂಗಣ ನಿರ್ಮಾಣ ಮಾಡಲು ಈಗಾಗಲೇ ಸರ್ಕಾರದಿಂದ 8.00 ಲಕ್ಷ ಅನುದಾನ ಮಾತ್ರ ಬಿಡುಗಡೆಯಾಗಿ ಇನ್ನುಳಿದ ರೂ.90.00 ಲಕ್ಷ ಅನುದಾನ ಇನ್ನೂ ಬಿಡುಗಡೆಯಾಗದೇ ಇರುವುದು ನಿಜವಲ್ಲವೇ;

ಆ. ಹಾಗಿದ್ದಲ್ಲಿ, ಉಳಿದ ರೂ 90.00 ಲಕ್ಷ ಅನುದಾನವನ್ನು ಸರ್ಕಾರ ಯಾವಾಗ ಬಿಡುಗಡೆ ಮಾಡಲಾಗುವುದು;

ಇ. ಹಾಗಿದ್ದಲ್ಲಿ ಉಳಿದಿರುವ ರೂ.90.00 ಲಕ್ಷಗಳ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಿ ಕ್ರೀಡಾಂಗಣ ನಿರ್ಮಾಣಕ್ಕೆ ಅನುಕೂಲ ಮಾಡಿಕೊಡಲಾಗುವುದೇ?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು)

ಅ.ಆ.ಇ. ಹೌದು.

ಗೌರಿಬಿದನೂರು ತಾಲ್ಲೂಕಿನ ಪ್ರತಿಭಾವಂತ ಕ್ರೀಡಾಪಟುಗಳಿಗೆ ಅನುಕೂಲ ಕಲ್ಪಿಸಲು ಸರ್ಕಾರಿ ಆದೇಶ ವಾಪ್ರಯು 71 ಯುಸೇಕ್ರೀ 2001 ದಿ 23.10.2001 ರಲ್ಲಿ ರೂ. 80.00 ಲಕ್ಷ ಅಂದಾಜು ವೆಚ್ಚದಲ್ಲಿ ಮಾತ್ರ ಕ್ರೀಡಾಂಗಣ ನಿರ್ಮಿಸಲು ಸರ್ಕಾರಿ ಆಡಳಿತಾತ್ಮಕ ಅನುಮೋದನೆ ನೀಡಿದೆ. ಕೋಲಾರ ಜಿಲ್ಲಾ ಪಂಚಾಯತ್‌ನಿಂದ ಈ ಉದ್ದೇಶಕ್ಕಾಗಿ ಈಗಾಗಲೇ ರೂ.8.00 ಲಕ್ಷಗಳನ್ನು ನಿರ್ಮಾಣ ಏಜನ್ಸಿಯಾದ ಜಿಲ್ಲಾ ಪಂಚಾಯತ್ ಇಂಜನೀಯರಿಂಗ್ ವಿಭಾಗಕ್ಕೆ ಬಿಡುಗಡೆಗೊಳಿಸಲಾಗಿದೆ. ಉಳಿದ ಅನುದಾನವನ್ನು 12ನೇ ಹಣಕಾಸು ಧನ ಸಹಾಯದಲ್ಲಿ ಒದಗಿಸಲು 2006–07ನೇ ಸಾಲಿನಲ್ಲಿ ಮೀಸಲಿಟ್ಟಿರುವುದರಿಂದ ಆದಷ್ಟು ಶೀಘ್ರವಾಗಿ ಹಣ ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

266 (307) ಶ್ರೀ ಸಿದ್ದು ಸಾವದಿ (ಜಮಖಂಡಿ) ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯ ಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ದಿನಾಂಕ 1.1.2004 ರಿಂದ ಇದು ವರೆವಿಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆ ಮಾಡಿರುವ ನಿವೇಶನಗಳ ಸಂಖ್ಯೆ ಎಷ್ಟು (ಹಂಚಿಕೆದಾರರ ಸಂಪೂರ್ಣ ವಿವರಗಳನ್ನು ಒದಗಿಸುವುದು);

ಆ. ಶಾಸಕರಿಗೆ ಸೈಟುಗಳನ್ನು ಒದಗಿಸಲು ಇರುವ ನಿಯಮಾವಳಿಗಳೇನು;

ಇ. ಹನ್ನೆರಡನೇ ವಿಧಾನ ಸಭೆಗೆ ಆಯ್ಕೆಯಾದವರಲ್ಲಿ ಎಷ್ಟು ಜನರಿಗೆ ಈಗಾಗಲೇ ಸೈಟ್ ಕೊಡಲಾಗಿದೆ. ಹಾಗೂ ಉಳಿದವರಿಗೆ ಕೊಡದೇ ಇರುವ ಕಾರಣಗಳೇನು; ಹಾಗಿದ್ದಲ್ಲಿ, ಯಾವಾಗ ಹಂಚಿಕೆ ಮಾಡಲಾಗುವುದು;